



## ಆಪ್ತ ಸಮಾಲೋಚನೆಯ ಕೃತಿ – ‘ಮನದೊಳಗಿನ ಮಾತು’

ಮನೋವೈಜ್ಞಾನಿಕ ತತ್ತ್ವಗಳನ್ನು ಆಧರಿಸಿ ‘ಆಪ್ತ ಸಮಾಲೋಚನೆ’ ನಡೆಸುವ ಅಗತ್ಯ ಮತ್ತು ಪ್ರಸ್ತುತ ದಿನಗಳಲ್ಲಿ ಇದರ ಮಹತ್ವವನ್ನು ತಿಳಿಸಿಕೊಡುವ ಕೃತಿಯೇ ಶ್ರೀ ಗಣೇಶ ರಾವ್ ನಾಡಿಗೇರ್ ಅವರ **‘ಮನದೊಳಗಿನ ಮಾತು.’** ಮನೋಚಿಕಿತ್ಸೆಯ ಕ್ಷೇತ್ರದಲ್ಲಿ ಉನ್ನತ ಪದವಿಯನ್ನು ಪಡೆದು, ಹಲವು ಬಗೆಯ ಪುನಶ್ಚೇತನ ಕಾರ್ಯಗಳಲ್ಲಿ ಸೇವೆ ಸಲ್ಲಿಸಿರುವ ಲೇಖಕರು ಕನ್ನಡ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ರಚಿಸಿರುವ ಈ ಗ್ರಂಥದಲ್ಲಿ ಅನೇಕ ಉದಾಹರಣೆ, ನೈಜ ಘಟನೆ ಹಾಗೂ ಅವುಗಳ ಆಪ್ತ ಸಮಾಲೋಚನೆಯ ವಿಧಾನಗಳನ್ನು ನೀಡಿರುವುದು ಸಾಮಾನ್ಯ ಜನರಿಗೆ ಈ ವಿಧಾನದ ಪರಿಚಯವನ್ನು ಮಾಡಿಕೊಡುವಲ್ಲಿ ನೆರವಾಗುತ್ತದೆ.

ಆಪ್ತ ಸಮಾಲೋಚನೆಯ ಪರಿಚಯ, ಅದನ್ನು ಮಾಡುವವನ ಗುಣಲಕ್ಷಣ, ಇದನ್ನು ಮಾಡುವ ವಿಧಾನ, ಪ್ರಮುಖ ಸಿದ್ಧಾಂತಗಳು, ಆಪ್ತ ಸಮಾಲೋಚನೆ ಮತ್ತು ಅಧ್ಯಾತ್ಮ, ಆಪ್ತ ಸಮಾಲೋಚಕನಿಗೆ ಎದುರಾಗುವ ಆತಂಕಗಳು — ಇವೇ ಇಲ್ಲಿನ ಪ್ರಧಾನ ಅಧ್ಯಾಯಗಳು. ಇದಕ್ಕೆ ಪೂರಕವಾಗಿ ನಾಲ್ಕು ಅನುಬಂಧಗಳಲ್ಲಿ ಹಲವು ಉದಾಹರಣೆಗಳನ್ನು ನೀಡಲಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿನಿಧಿ ಪ್ರಶಸ್ತಿಗೆ ಭಾಜನವಾಗಿರುವ ಈ ಕೃತಿ ಆಪ್ತ ಸಮಾಲೋಚಕರಿಗಷ್ಟೇ ಅಲ್ಲ, ಎಲ್ಲ ಓದುಗರಿಗೂ ಅಮೂಲ್ಯವಾದುದು.





**ಕೃತಿ:** ಮನದೊಳಗಿನ ಮಾತು
**ಲೇಖಕ :** ಗಣೇಶ್‌ರಾವ್ ನಾಡಿಗೇರ್
**ಪ್ರಕಾಶನ :** ನವಕರ್ನಾಟಕ ಪ್ರಕಾಶನ
**ಬೆಲೆ:** 125
**ಪುಟ:** 144

## ‘ಭಾವಸರಸಿ’ ಕವನ ಸಂಕಲನ

ಕನ್ನಡದಲ್ಲಿ ಕವಿತೆಗಳ ಯುಗ ಮುಗಿದೇ ಹೋಯಿತೇನೋ ಎನ್ನುವಂತೆ, ಸತ್ವಭರಿತ ಕವನಗಳ ರಚನೆಯಾಗಲಿ, ಓದುಗರ ಉತ್ಸಾಹಭರಿತ ನಿರೀಕ್ಷೆಯಾಗಲಿ ಕಂಡುಬರುತ್ತಿಲ್ಲ. ಹಿಂದೆ ನಮ್ಮ ಶ್ರೇಷ್ಠ ಕವಿಗಳ ರಚನೆಗಳಲ್ಲೇ ತೃಪ್ತಿಪಡಬೇಕಾದ ಅನಿವಾರ್ಯತೆ ಉಂಟಾಗಿದೆ. ಇದಕ್ಕೆ ಅಪವಾದವೆಂಬಂತೆ ಪ್ರೊ. ಪ್ರಭುಪ್ರಸಾದ್ ಅವರ ಕವಿತೆಗಳ ಸಂಕಲನ **‘ಭಾವಸರಸಿ’** ಪ್ರಕಟವಾಗಿದೆ.

೭೩ ಕವಿತೆಗಳೂ, ಕೆಲವು ಚುಟುಕು ಮತ್ತು ಭಜನೆಗಳು, ಹಾಗೂ ೧೧ ಇಂಗ್ಲಿಷ್ ರಚನೆಗಳಿರುವ ಸಂಕಲನವೇ ‘ಭಾವಸರಸಿ’. ಇದರಲ್ಲಿ ಛಂದೋಲಯಬದ್ಧ ರಚನೆಗಳು ಹೆಚ್ಚಿನವು. ಮುನ್ನುಡಿಯಲ್ಲಿ ಲೇಖಕರೇ ಬರೆದಿರುವಂತೆ, ಅವರ ಗುರು ಜಿ.ಪಿ.ರಾಜರತ್ನಂ ಅವರ ಮಾತಿನಂತೆ ಛಂದೋಬದ್ಧ ರಚನೆಗಳನ್ನೇ ಹೆಚ್ಚಾಗಿ ಲೇಖಕರು ರಚಿಸಿದ್ದಾರೆ. ಹಲವು ರಚನೆಗಳು ರಾಗ, ತಾಳ, ಲಯಬದ್ಧವಾಗಿ ಹಾಡಲು ಅನುಕೂಲವಾಗುವಂತಹ ರಚನೆಗಳು. ಲೇಖಕರಿಗಿರುವ ಆಳವಾದ ಸಂಗೀತದ ಅರಿವು ಕೂಡ ಇದಕ್ಕೆ ನೆರವಾಗಿದೆ.

ವಿಭಿನ್ನ ವಿಷಯಗಳಿರುವ ಕವಿತೆಗಳೊಂದಿಗೆ, ಭಾವಪೂರ್ಣ ಪ್ರಾರ್ಥನೆಯ ಹಾಗೂ ಅನುಭಾವ ವಿಷಯಕವಾದ ರಚನೆಗಳು ಇಲ್ಲಿ ವಿಶೇಷವಾಗಿ ಗಮನ ಸೆಳೆಯುತ್ತವೆ. ಶ್ರೀರಾಮಕೃಷ್ಣ, ವಿವೇಕಾನಂದ, ಶ್ರೀ ಸಾಯಿಬಾಬಾ, ಬಸವಣ್ಣ ಗಾಂಧೀಜಿ, ಶಿವ, ಸರಸ್ವತಿ– ಗಣೇಶ–ಸುಬ್ರಹ್ಮಣ್ಯ– ಮುಂತಾದ ದೇವತೆಗಳ ಸ್ತುತಿಪರವಾದ ರಚನೆಗಳು ಇವುಗಳಲ್ಲಿ ಪ್ರಮುಖ. ‘ಮಾವಿನ ಚಿಗುರಲಿ ಕೋಗಿಲೆ ದನಿಯಲಿ, ಬಗೆ ಬಗೆ ಹೂಗಳ ಪರಿಮಳದೆಲರಲಿ’ ಎಂದು ಆರಂಭವಾಗುವ ‘ಯುಗಾದಿ’ ಎಂಬ ಕವಿತೆ ಕನ್ನಡ ನವೋದಯ ಕಾವ್ಯವನ್ನು ನೆನಪಿಸುತ್ತದೆ. ಹಲವು ಹಾಡುಗಳ ಕೊನೆಯಲ್ಲಿ ಅವರ ‘ಜಯದೇವ’ ಎಂಬ ಕಾವ್ಯನಾಮವಿದೆ. ನಮ್ಮ ಸಂಸ್ಕೃತಿಯನ್ನು ಈ ಕವಿತೆಗಳು ಬಿಂಬಿಸುತ್ತವೆ.




**ಕೃತಿ:** ಭಾವಸರಸಿ (ಕವನ ಸಂಕಲನ)
**ಲೇಖಕ :** ಕೆ.ಬಿ. ಪ್ರಭುಪ್ರಸಾದ್
**ಪ್ರಕಾಶನ :** ಸಂವಹನ, 12/1ಎ, ಈವನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ, ಮೈಸೂರು
ದೂ. 9902639593
**ಬೆಲೆ:** 125
**ಪುಟ:** 144